# ಓ ಗಂಡಸೇ ನೀನೆಷ್ಟು ಒಳ್ಳೆಯವನು?

ಕಳೆದ ಶತಮಾನದ ಎಂಬತ್ತರ ದಶಕದಲ್ಲಿ ಕನ್ನಡದಲ್ಲಿ ಈ ಹೆಸರಿನ ಕಾದಂಬರಿಯೊಂದು ಪ್ರಕಟವಾಗಿತ್ತು. ಡಾ.ಎಂ.ಪಿ.ಉಮಾದೇವಿ ಬರೆದ ಅದು ಮೊದಲು 'ಮಯೂರ' ಮಾಸಪತ್ರಿಕೆಯಲ್ಲಿ ಒಂದೇ ಸಲಕ್ಕೆ ಕಿರುಕಾದಂಬರಿ ರೂಪದಲ್ಲಿ ಬೆಳಕು ಕಂಡಿತ್ತು. ಆ ಕಾಲಘಟ್ಟದಲ್ಲಿ ಕಾಲೇಜು ಕ್ಯಾಂಪಸ್ಸುಗಳಲ್ಲಿ ಗಂಡುಡುಗರನ್ನು ಹೀಗೆ ರೋಮ್ಯಾಂಟಿಕ್ ಆಗಿ ವರ್ಣಿಸುವ ಆರಾಧಿಸುವ ಅಲೆ ಹುಡುಗಿಯರಲ್ಲಿ ತೇಲುತ್ತಿತ್ತು. ಈ ಮಾತನ್ನು ಹೆಂಗಸರು ಮಾತ್ರ ಹೇಳಲು ಸಾಧ್ಯ ಎಂಬುದು ದುರಂತ ವ್ಯಂಗ್ಯ ಅಥವಾ ಸತ್ಯ ಅಲ್ಲವೆ? 'ಓ ಗಂಡಸೇ ನೀನೆಷ್ಟು ಒಳ್ಳೆಯವನು?' ಎಂದು ಒಬ್ಬ ಗಂಡಸು ಇನ್ನೊಬ್ಬ ಗಂಡಸಿಗೆ ಹೇಳಬಲ್ಲನೆ? ಅವನು ಇನ್ನೊಬ್ಬ ಗಂಡಸನ್ನು ಮೆಚ್ಚಬಹುದು, ಗೌರವಿಸಬಹುದು, ಪೂಜಿಸಬಹುದು. ನಾಯಕನೆಂದು ಕರೆದು ಗುಲಾಮನಂತೆ ನಡೆದುಕೊಳ್ಳಬಹುದು. ಅವನ ಮೇಲಿನ ಅಭಿಮಾನದಿಂದ ಅವನ ಪರವಾಗಿ ಗುಂಪುಕಟ್ಟಿ ಎಂಥ ಬಗೆಯ ನೈತಿಕ– ಅನೈತಿಕ ಕೃತ್ಯವನ್ನಾದರೂ ನಡೆಸಬಹುದು. ಜೈಲಿಗೂ ಹೋಗಬಹುದು, ಪ್ರಾಣವನ್ನು ಸಹ ಬಿಡಬಹುದು. ಆದರೆ ರೋಮ್ಯಾಂಟಿಕ್ ಆಗಿ 'ಅಪ್ಪಿ'ಕೊಳ್ಳುವ ಮಟ್ಟಿಗೆ ಹೋಗಲಾರ.

ಆದರೆ ಹೆಂಗಸು ಗಂಡಸನ್ನು ಅವನು ಎಂಥ ಕ್ರೂರಿ, ಅಸಮಾನ ಮನಸ್ಸುಳ್ಳವನು ಎಂಬುದನ್ನು ಚರಿತ್ರೆಯುದ್ದಕ್ಕೂ ಕಂಡಿದ್ದಾಳೆ. ಅವನಿಂದ ಭಯಂಕರ ಹಲ್ಲೆಗೆ ತುತ್ತಾಗಿದ್ದಾಳೆ. ಅವನ ಶೋಷಣೆಯನ್ನು, ಕ್ರೌರ್ಯವನ್ನು ಅನುಭವಿಸಿದ್ದರೂ ಅವನನ್ನು ತನ್ನ ಸಂಗಾತಿಯನ್ನಾಗಿ ತನುಮನಗಳ ಮೂಲಕ ಸ್ವೀಕರಿಸುತ್ತಾ ಬಂದಿದ್ದಾಳೆ. ಅವನ ಕ್ರೌರ್ಯವನ್ನು ಕ್ಷಮಿಸುತ್ತಾ 'ಅಹಾ! ನೀನೆಷ್ಟು ಒಳ್ಳೆಯವನು!' ಎಂದು ಉದ್ಗಾರ ತೆಗೆಯುತ್ತಲೇ ಇದ್ದಾಳೆ. ಬಹುಶಃ ಮಾತೃಪ್ರಧಾನ ವ್ಯವಸ್ಥೆ ಮಾಯವಾಗಿ ಪುರುಷಪ್ರಧಾನ ವ್ಯವಸ್ಥೆ ಜಾರಿಗೆ ಬಂದ ಶತ ಶತಮಾನಗಳ ನಂತರ ಸ್ತ್ರೀಯ ಅಸ್ತಿತ್ವ ಇರುವುದೇ ಹೀಗೆ ಎಂಬ ನಂಬಿಕೆ ದೃಢವಾಗಿರಬೇಕು. ಈ ನಂಬಿಕೆ– ಪುರುಷನು ಇರಬೇಕಾದದ್ದು ಹೀಗೆ; ಒರಟಾಗಿ, ಕ್ರೂರಿಯಾಗಿ, ಹಲ್ಲೆ ಕೋರನಾಗಿ, ದಬ್ಬಾಳಿಕೆಗಾರನಾಗಿ, ಆಳುವವನಾಗಿ ಮತ್ತು ಯಜಮಾನನಾಗಿ... ಎಂದು ಮಾನಸಿಕವಾಗಿ ಸ್ತ್ರೀಯಲ್ಲಿ ಸ್ಥಿರಗೊಂಡಿರಬೇಕು. ಅವನು ಬದುಕಿನಲ್ಲಿ ನಿರ್ವಹಿಸಬೇಕಾದ ಮತ್ತು ಇರಬೇಕಾದ ಪಾತ್ರವೇ ಅಂಥಾದ್ದು ಎಂಬ ದೃಢ ಅಭಿಪ್ರಾಯ ಸ್ತ್ರೀಯಲ್ಲಿ ಶತ ಶತ ಮಾನಗಳ ಅವಧಿಯಲ್ಲಿ ವಂಶವಾಹಿಗಳಲ್ಲಿ ಸೇರಿಹೋಗಿರಬೇಕು. ಹೀಗೆ ಗಂಡಸಿನ ಯಜಮಾನ್ಯತೆಯನ್ನು ಕೇವಲ ಸಾಮಾಜಿಕ– ಆರ್ಥಿಕ– ಮಾನಸಿಕ ಕಾರಣಗಳಿಂದ ಒಪ್ಪಿಕೊಂಡಿದ್ದು ಮಾತ್ರವಲ್ಲದೆ ಜೈವಿಕವಾಗಿ ವಂಶವಾಹಿಗಳಲ್ಲಿ ಅಂತರ್ಗತ ಮಾಡಿಕೊಂಡಿರುವುದು ಕಾರಣ ಇರಬಹುದೆ? ಕಳೆದ ಶತಮಾನದಲ್ಲಿ ರಚಿತವಾದ ರೋಮ್ಯಾಂಟಿಕ್ ಆಂಗ್ಲ ಕಾದಂಬರಿಗಳಲ್ಲಿ ಹೆಂಗಸರು ಈ ಬಗೆಯ ದಾಸ್ಯದಿಂದ ಆನಂದ ಪಡುವುದನ್ನು ಕಾಣಬಹುದು. ನಮ್ಮ ಕನ್ನಡದ ಕಾದಂಬರಿಗಾರ್ತಿಯರು ಸಹ ಈ ಬಗೆಯ ರಚನೆಯನ್ನು ಮಾಡಿದ್ದಾರೆ. ಸಿಗರೇಟು ಸೇದುವ, ಮದ್ಯಪಾನ ಮಾಡುವ, ಹಲ್ಲೆ ಮಾಡುವ ಗಂಡಸರನ್ನು ಇಷ್ಟಪಡುವ ಹೆಂಗಸರನ್ನು ಕಂಡಿದ್ದೇನೆ. ಅಂಥವರು ಮಾತ್ರ ಗಂಡಸರೆಂದು ಕರೆಸಿಕೊಳ್ಳುವ ಯೋಗ್ಯತೆಯಿರುವವರೆಂದು ಮಾನ್ಯ ಮಾಡುವವರನ್ನು ನೋಡಿ ನಾನು ಬೆರಗಾಗಿದ್ದೇನೆ. ಇಂಥ ಗುಣಗಳಿಲ್ಲದವನು 'ಹೇತ್ಲಾಂಡಿ'ಯೆಂದು ಬಿರುದು ಪಡೆದುದನ್ನೂ ಕೆಲವು ಪ್ರಸಂಗಗಳಲ್ಲಿ ಕಂಡಿದ್ದೇನೆ.

ಈ ಬಗೆಯ ಹೆಂಗಸಿನ ಮನಸ್ಥಿತಿಗೆ ಮಾನಸಿಕ ಕಾರಣಗಳನ್ನು ನೀಡಿ ವಿಶ್ಲೇಷಣೆ ಮಾಡುವವರೂ ಇದ್ದಾರೆ. ಈ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ತಾನು ಮಾಡಲಾಗದ ಅನೇಕ ಕೆಲಸಗಳನ್ನು ತನ್ನ ಪ್ರಿಯಕರ/ ಗಂಡನಲ್ಲಿ ಕಾಣಬಯಸುತ್ತಾಳೆ. ಸಮಾಜ ಅವಳಿಗೆ ಇಂಥದ್ದು ನೈತಿಕ– ಇಂಥದ್ದು ಅನೈತಿಕ ಎಂದು ತಿಳಿ ಹೇಳಿ ಅವಳ ಮನಸ್ಸಿನ ಆಳಕ್ಕೆ ಇಳಿಸಿಬಿಟ್ಟಿದೆ. ಅಂಥವುಗಳಿಗೆ ಮೌಲ್ಯಗಳ ಸ್ಥಾನ ನೀಡಿ ಗೌರವಿಸಿದೆ. ಮಹಿಳೆ ಈ ಮೌಲ್ಯಗಳ ಸಂರಕ್ಷಕಳು; ಅವಳಿಂದಾಗಿ ಈ ಸಮಾಜದ ನೈತಿಕತೆ ನಿಂತಿದೆ, ಅವಳಿಂದಾಗಿ ಕುಟುಂಬ ವ್ಯವಸ್ಥೆ ಭದ್ರವಾಗಿ ಉಳಿದಿದೆ, ಆಚಾರ ಸಂಪ್ರದಾಯ ಸಂಸ್ಕೃತಿಗಳು ಅವಳಿಂದಾಗಿ ಬದುಕಿ ಬಾಳುತ್ತಿವೆ– ಎಂಬಂಥ 'ಚಿನ್ನ'ದಂಥ ಮಾತುಗಳನ್ನಾಡಿ ಅವಳನ್ನು ಸದಾ ಅಟ್ಟಕ್ಕೇರಿಸುತ್ತಿದೆ, ಇಂಥ ಬೆಣ್ಣೆಯಂಥ ಮಾತುಗಳನ್ನು ಅವಳು ನಿಜಕ್ಕೂ ನಂಬಿಬಿಟ್ಟಿದ್ದಾಳೆ! ಜೊತೆಗೆ ತಾನು ಬರೆದ ಧಾರ್ಮಿಕ/ ಪುರಾಣ ಗ್ರಂಥಗಳಲ್ಲಿ ಅವಳಿಗೆ ಸರ್ವಶಕ್ತಿ, ಮಾತೆ, ದೇವಿ ಮುಂತಾದ ಅಭೂತ ವೈಭವದ ಮಾತುಗಳಿಂದ ಕರೆದು, ವಾಸ್ತವ ನೆಲೆಯಲ್ಲಿ ಅವಳಿಗಿಲ್ಲದ ಸ್ಥಾನವನ್ನು ನೀಡಿ ವರ್ಣಿಸಲಾಗಿದೆ. ಇದನ್ನೆಲ್ಲಾ ಸ್ತ್ರೀ ನಂಬುತ್ತಾ ಬಂದಿದ್ದಾಳೆ. ಆ ಸಮಾಜ ವ್ಯವಸ್ಥೆ ಹೇಳುತ್ತಾ ಬಂದಿರುವ ಎಲ್ಲಾ ಕೆಲಸಗಳನ್ನೂ ಕಿಂಚಿತ್ ಊನವಿಲ್ಲದಂತೆ ಆಚರಿಸುತ್ತಾ ಬಂದಿದ್ದಾಳೆ. ಅವಳ ಎದೆಯಲ್ಲಿ 'ಓ ಗಂಡಸೇ ನೀನೆಷ್ಟು ಒಳ್ಳೆಯವನು!' ಎಂಬ ನಂಬುಗೆ ಸ್ಥಿರವಾಗುತ್ತಾ ಸಾಗಿದೆ.

ಆದರೆ ಕಾಲ ಬದಲಾಗುತ್ತಿದೆ. ಚಲನೆಯ ಚಕ್ರ ಮೇಲು ಕೆಳಗಾಗುತ್ತಿದೆ. ಸ್ತ್ರೀಗೆ ಚರಿತ್ರೆಯುಂಟು ಮಾಡಿರುವ ಅರಿವಾಗುತ್ತಿದೆ. ಅವಳು ಬದುಕಿನಲ್ಲಿ ಇಂದು ನಿರ್ವಹಿಸುತ್ತಿರುವ ಪಾತ್ರಗಳು ವಾಸ್ತವದ ಕಟು ಸತ್ಯವನ್ನು ತೆರೆದು ತೋರಿಸುತ್ತಿವೆ. ಸಿಹಿಯ ವಿವಿಧ ರೂಪಗಳಲ್ಲಿರುವ ಹುನ್ನಾರದ ಕಹಿಗಳು ಬೆಳಕಿಗೆ ಬರುತ್ತಿವೆ.

**■ ಶಿಕಾಕು**

## ಮಾತೇ ಮುತ್ತು

★ ಉಡುಪು ನಿಮ್ಮ ಬಹಳಷ್ಟು ಸುಂದರ ಅಂಶಗಳನ್ನು ಮರೆ ಮಾಡುತ್ತದೆ, ಆದರೆ ಅಸುಂದರಗಳನ್ನಲ್ಲ.

-ಖಲೀಲ್ ಗಿಬ್ರಾನ್

★ ಆನಂದ ಪ್ರತಿಯೊಬ್ಬನ ಒಳಗೆ ಇದೆ. ಸತ್ಯವನ್ನು ಹುಡುಕುವುದರಲ್ಲಿ ಅದು ಅಡಗಿದೆ.

-ಮಹಾತ್ಮ ಗಾಂಧೀಜಿ

★ ಸಮುದ್ರಕ್ಕೆ ನದಿಗಳೆಲ್ಲವೂ ಹರಿಯುತ್ತವೆ, ಆದರೆ ಅದು ತುಂಬುವುದಿಲ್ಲ!

-ತರಾಸು

★ ಔದಾರ್ಯದ ದುರುಪಯೋಗ ಪಡೆಯುವ ಧೂರ್ತರ ಬಗ್ಗೆ ಸದಾ ಜಾಗೃತವಾಗಿರಬೇಕು.

-ವೀರೇಂದ್ರ ಹೆಗ್ಗಡೆ

★ ಜಾತಿಗೂ ಹುಟ್ಟಿಗೂ ಸಂಬಂಧ ಇರುವುದರ ಹುಟ್ಟಡಗಿಸಬೇಕಾಗಿದೆ.

-ದೇವನೂರ ಮಹಾದೇವ

★ ನಿಮ್ಮ ಗುರಿ ಸೇವೆಯಾಗಿರಲಿ, ಅದನ್ನು ಗೆಲುವಿಗಾಗಿ ಮಾಡಬೇಡಿ. ಗೆಲುವು ತನ್ನಷ್ಟಕ್ಕೆ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

-ವಿನೋಬಾ ಭಾವೆ

★ ದುಗ್ಗಾಣಿ ಎಂಬುದು ದುರ್ಜನ ಸಂಗ, ದುಗ್ಗಾಣಿ ಬಲು ಕೆಟ್ಟದು; ಆಚಾರ ಹೇಳೋದು ದುಗ್ಗಾಣಿ, ನೀಚರ ಮಾಡೋದು ದುಗ್ಗಾಣಿ.

-ಪುರಂದರದಾಸ

★ ಶಿಕ್ಷಣ ಬಡವನಿಗೆ ಅಸಲು ಹಣವಿದ್ದಂತೆ, ಶ್ರೀಮಂತನಿಗೆ ಬಡ್ಡಿ ಇದ್ದಂತೆ.

-ಸ್ವಾಮಿ ವಿವೇಕಾನಂದ

★ ಶ್ರದ್ಧೆಯಿಂದ ಜ್ಞಾನ ಲಭ್ಯ, ಶ್ರದ್ಧೆಯಿಲ್ಲದಿದ್ದರೆ ಜ್ಞಾನ ಮರೀಚಿಕೆಯಾಗುತ್ತದೆ.

-ಗೌತಮ ಬುದ್ಧ

★ ಇತಿಹಾಸ ಮರುಕಳಿಸುವುದಿಲ್ಲ; ಬರಲಿರುವ 'ನಾಳೆ'ಯು, ನಿನ್ನೆ ಮತ್ತು ಇಂದಿನ ಮುಂದುವರಿಕೆಯಾಗಿರಬಹುದು; ಆದರೆ ಅವುಗಳ ನಕಲು ಅಂತೂ ಅಲ್ಲ.

-ಚಂದ್ರಶೇಖರ ಪಾಟೀಲ

★ ಜ್ಞಾನವಿಲ್ಲದೆ ನಿಜವಾದ ಸ್ವಾತಂತ್ರ್ಯ ಸಿಕ್ಕಲಾರದು.

-ಜ್ಯೋತಿಭಾ ಫುಲೆ

★ ಮನುಷ್ಯ ಬಯಸುವುದು ದೀರ್ಘಾಯುಷ್ಯವನ್ನು, ಮುಪ್ಪನ್ನಲ್ಲ!

-ಡಿವಿಜಿ

★ ಯಾವ ಹೆಣ್ಣನ್ನು ಪ್ರೀತಿಸುತ್ತೀಯೋ ಅವಳಿಗಾಗಿ ನೀನು ಜೀವ ಕೊಡಬಲ್ಲೆ, ನಿಜ. ಆದರೆ ಅವಳೊಡನೆ ಜೀವಿಸುವುದು ನಿನಗೆ ಕಷ್ಟವಾಗುತ್ತದೆ!

-ರೋಮ್ಯಾ ರೋಲಾ